ಅದಕ್ಕೇ ಮತ್ತೊಂದು ಕಥೆಯನ್ನ ಮುದುಕಿಯಿಂದ ಕೇಳಿ ತನ್ನ ಬುದ್ಧಿವಂತಿಕೆ ತೋರಿಸಿಕೊಳ್ಳಾಕ ಬಂದಿದ್ದ. 'ಓಹೋ ಇದಾ ವಿಷಯ' ಅಂದು ದುರುಗಮ್ಮ ಸುಮ್ಮನಾದಳು.

ಪುಲಿಗೆ ಸಿಟ್ಟು ಬಂದು 'ಅಲ್ಲಂಗೇ ಅವನೇನು ಅಂಥಾ ಪರಾಕ್ರ ಕಥೆಯೇನು ಹೇಳಿಲ್ಲ. ತಮ್ಮ ಮನಿ ಹಿಂದಲ ತಿಪ್ಪೆನಾಗ ಒಂದು ಕುನ್ನಿ ಕಾಲಿಗೆ ಗಾಯ ಆಗಿ ಅಳಕಾಂತ ಬಿದ್ದಿತ್ತಂತೆ. ಇವನು ಅದ್ನ ನೋಡಿ, ಗಾಯಕ್ಕೆ ಮಲಾಮು ಹಚ್ಚಿ ಸರಿ ಮಾಡಿ ಆ ಕುನ್ನಿಯನ್ನ ಅದರ ತಾಯಿ ತಾಕ ಸೇರಿಸಿ ಬಂದನಂತೆ. ಅವಾಗ ಅದು ಇವನ ಕಾಲು ನೆಕ್ಕಿತಂತೆ, ಇವನು ನಕ್ಕನಂತೆ. ಇದರಾಗ ಏನ ರಚಿನ ಐತ ನೀನೆ ಹೇಳು? ನಿಂತಾಕ ಎಂಥೆಂಥಾ ಕಥೆ ಕೇಳೀವಿ. ಏನು ರಚನೆ ಏನ ಕಥೆ... ಅಬ್ಬಾ! ಏಳು ಗುಡ್ಡದ ಆಚೆ ಇರೋ ಕರೀ ರಾಕ್ಷಸನ ವರ್ನೆ ಕೇಳಿ ಹೆಣ್ಣು ಗಂಡು ಅಂಬಲಂಗೆ ಏಟು ಹುಡುಗರು ಉಚ್ಚೆ ಒಯ್ಕಂಡಿಲ್ಲ. ಅದೂ ಬುಡು ಬಡಗಿಯವನು ಕೊರಡಿನ ಸೀಳಿನ ಮಧ್ಯೆ ಇಟ್ಟಿದ್ದ ಗುಣಿ ತೆಗೆಯಾಕ ಹೋಗಿ ಬೀಜ ಒಡಕೊಂಡ ಕೋತಿ ಕಥೆ ಕೇಳಿ ಒಬ್ಬರೂ ಬುಡದಂಗ ನಕ್ಕು ನೀರಾಗೀವಿ. ಅವಪ್ಪಾ ಕಥೆ ಅಂದರೆ'. ಹೀಗೆ ಪುಲಿಯ ಮಾತುಗಳು ಕಡಾಣಿ ಇಲ್ಲದ ಬಂಡಿ ಥರ ಸಾಗುತ್ತಿದ್ದವು.

ದುರುಗಮ್ಮ ಅವನ ಮಾತಿಗೆ ಬ್ರೇಕ್ ಹಾಕಿ, 'ಲೋ ಪುಲಿ ಹಂಗೆ ನೋಡಿದರೆ ಸಾಗರ ಹೇಳಿದ್ದೇ ನಿಜವಾದ ಕಥೆ.' ಅಂದಳು. ಪುಲಿಗೆ ಸಿಟ್ಟು ಬಂದು, 'ಏ ಮುದುಕಿ ನಿನಗೇನು ತಲಿಗಿಲಿ ಕೆಟ್ಟತಾ ಯೆಂಗೆ? ಅದೊಂದು ಪುರಾಣಲ್ಲ, ಪಂಚತಂತ್ರ ಅಲ್ಲ; ಜನಪದಂತೂ ಅಲ್ಲೇ ಅಲ್ಲ. ಅದೆಂಗೆ ಅದನ್ನ ಕಥೆ ಅಮ್ತಾರೆ ಹೇಳು' ಎಂದದ್ದಕ್ಕೆ ದುರುಗಮ್ಮ, 'ಲೋ ಪುಲಿ ನಾನು ಹೇಳೋವಲ್ಲ ನನ್ನ ಕಥೆ ಅಲ್ಲ, ಎಲ್ಲೋ ಕೇಳಿದ್ದ ಕಥೆಗೆ ರೆಕ್ಕೆಪುಕ್ಕ ಹಚ್ಚಿ ಹೇಳಿ ನಿಮ್ಮನ್ನ ಖುಷಿ ಪಡಿಸ್ತೀನಿ. ಬಾಳಾ ಕಟ್ಟುಕಥೆಗಳೇ ಅವು'. ಹೀಗೆ ಕತೆ ಕಟ್ಟೋದರ ಬಗ್ಗೆ ವಿವರಿಸಿದಳು.

ಕಥೆ ಹೇಳ್ತೀನಿ ಅಂದ್ರೇನೆ ನಾಕು ಮಾರು ಕಿವಿ ಅಗಲಿಸೋ ಪುಲಿ ಮಲ್ಲಿಗೆ ತಾನೂ ಕೂಡ ಅಂತದೊಂದು ಕಥೆ ಬರೆಯಬೇಕು ಅಂತನಿಸಿತು. ಅದೇ ಸಂದರ್ಭದಲ್ಲಿ ಹಳ್ಳಿಗಾಡಿನ ಬಡ ಹುಡುಗರ ಕಥೆಯನ್ನ ಸಿನಿಮಾ ಮಾಡಬೇಕೆಂದು ಊರೂರು ಅಲೆಯುತ್ತಿದ್ದ ಆರ್ಟ್ ಸಿನಿಮಾ ಡೈರೆಕ್ಟರ್ ಒಬ್ಬರು ಆ ಊರಿಗೂ ಬಂದರು. ಊರಿನ ಅಗಸಿ ಕಟ್ಟೆ ಮೇಲೆ ಬ್ಯಾನರ್ ಹಾಕಿ ಮೈಕಲ್ಲಿ, 'ಹೊಸ ಕಥೆಗಾಗಿ ಅನ್ವೇಷಣೆ ಮಾಡ್ತಿದೀವಿ. ಆಸಕ್ತರು ಕಥೆ ಬರೆದು ಕಳಿಸಿರಿ. ಆ ಕತೆ ನಮಗೆ ಇಷ್ಟವಾದರೆ, ಐವತ್ತು ಸಾವಿರ ರೂಪಾಯಿ ಬಹುಮಾನದ ಜೊತೆ ಅದನ್ನೇ ಸಿನಿಮಾ ಮಾಡುತ್ತೇವೆ' ಎಂದು ಅನೌನ್ಸ್ ಮಾಡಿ ಕರಪತ್ರ ಕೊಟ್ಟರು. ಇಂಥವರು ಬಂದಾಗ ಮುಂದಿರೋ ಜಂಬಣ್ಣ 'ನಮ್ಮ ಊರಿಂದ ಗಟ್ಟಿ ಕಥೆ ಕೊಡ್ತೀವಿ ಬುಡಿ' ಎಂದು ಆಸ್ವಾಸನೆ ಕೊಟ್ಟ. ಆ ಮಾತನ್ನು ಕೇಳಿದ ಆ ಭಾಗದ ಅನೇಕ ಪ್ರತಿಭಾವಂತರು ಹೆಸರು ನೀಡೋಕೆ ಮುಂದೆ ಬಂದರೆ, ಕೆಲವರು ಇಂಥ ಸಬ್ಸಿಡಿ ಡೈರೆಕ್ಟರ್‌ಗಳನ್ನ ಬಾಳಾ ಮಂದೀನಿ ನೋಡೀವಿ ಅಂತ ವಲ್ಲಿ ಜಾಡಿಸಿ ಎದ್ದರು.

ಜನದಾಗ ಎಲ್ಲೋ ಮೂಲೇಲಿ ಇದ್ದ ಪುಲಿ ಮಲ್ಲಿ ಕೂಡ ಹೆಸರು ಕೊಟ್ಟ. ಅವರು, 'ಏನಪ್ಪಾ ನಿನ್ನ ಕಥೇನೂ ಸಿನಿಮಾ ಆಗಬೇಕಂಥ ಆಸೆನಾ?' ಎಂದಾಗ ಪುಲಿ, 'ನಾನು ಬರೆದ ಕಥೆ ಸಿನಿಮಾ ಆಗುತ್ತೋ ಬಿಡುತ್ತೋ ಗೊತ್ತಿಲ್ಲ. ನನಗೆ ಕಥೆ ಅಂದ್ರೆ ಬಾಳಾ ಇಷ್ಟ. ನಾನೂ ಕಥೆ ಬರದು ನಮ್ಮ ಶಾಲೇಲಿ ಭೇಷ್ ಅನ್ನಿಸಿಕೋಬೇಕು ಅಂಬದು ಜಗ್ಗಿ ಆಸೆ ಐತೆ. ಹಂಗೆ ನಿಮಗೆ ಕತೆ ಇಷ್ಟವಾದರೆ ರೊಕ್ಕ ಕೊಡ್ತೀರಂತೆ, ಆ ರೊಕ್ಕದಾಗ ಮನ್ಯಾಗ ಪಾಯಿಖಾನೆ ಕಟ್ಟಿಸಬೋದು. ಮೊದಲೇ ನಾವು ಜೋಳಿಗೆ ಅಕ್ಕೆಂಡು ಊರೂರು ತಿರುಗೋ ನಮಿಗೆ ಒಂದು ವಿಳಾಸ ಪಳಾಸ ಏನಿಲ್ಲ. ಯಂಗೋ ಧರ್ಮಸ್ಥಳ ಸಂಘದಿಂದ ಬಡ್ಡಿಸಾಲ ತಗಂಡು ಜಾಗ ಮನಿ ಮಾಡಿಕೆಂಡೀವಿ. ಪಾಯಿಖಾನಿಗೆ ಮಾತ್ರ ರೊಕ್ಕ ಸಾಲ್ದ ಬಂದಿದ್ದವು. ಈ ಬಹುಮಾನ ಬಂದ್ರೆ ನಮ್ಮ ಅಕ್ಕ ತಂಗೇರಿಗೆ ತ್ರಾಸ ಕಮ್ಮಿ ಆಗತ್ತೆ ಸಾರ್' ಅಂದ. ಅವನ ಮುಗ್ಧ ಮಾತುಗಳು ಕೇಳಿ ನಿರ್ದೇಶಕರಿಗೆ ಹುಡುಗನ ಬಗ್ಗೆ ಹೆಮ್ಮೆ ಅನಿಸಿತು. ಕಥೆ ಬರೆಯೋ ಲಕ್ಷಣ ಅವನಲ್ಲಿ ಕಾಣದಿದ್ದರೂ ಯಾವುದಾದರೂ ಪಾತ್ರ ಕೊಟ್ಟು ಹುಡುಗನಿಗೆ ಸಹಾಯ ಮಾಡಬಹುದು ಅನ್ನಿಸಿ ಮುಂದಲ ಊರಿಗೆ ಗಾಡಿ ಬಿಟ್ಟರು.

ಪುಲಿ ಅವೊತ್ತು ಶಾಲಿಗೆ ಗೋಲಿ ಹೊಡೆದು ದುರುಗಮ್ಮವ್ವಗ ಅರ್ಧ ಚೆಟ್ಟಿ ಎಲೆ ಅಡಿಕೆ, ಕಡ್ಡಿಪುಡಿ ತಂದು, ಕುಕ್ಕರ ಗಾಲಲ್ಲಿ ಕುಂತು, 'ಒಳ್ಳೇ ಕಥೆ ಹೇಳಂಗೆ' ಅಂದ. ಮುದುಕಿ ಎರಡು ಎಲೆ ದವಡೆಗಾಕಿ ನಂಬಲಿ ಮಾತು ಶುರು ಮಾಡಿದಳು: 'ನೋಡಪಾ ಜೀವನದಾಗ